ಕರ್ನಾಟಕ ಸರ್ಕಾರ
# ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ
(ಕರ್ನಾಟಕ ಸರ್ಕಾರದ ಅಂಗ ಸಂಸ್ಥೆ)
Government of Karnataka
# Karnataka Residential Educational Institutions Society
(An Organisation of Govt. of Karnataka)

ಕವಶಿಸಸ/ಆಡಳಿತ/ಸಿಬ್ಬಂದಿ/ಸಿಆರ್–/2021–22 ದಿನಾಂಕ: 24.05.2022

## ಅಧಿಕೃತ ಜ್ಞಾಪನ

ವಿಷಯ: ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವ್ಯಾಪ್ತಿಯಲ್ಲಿನ ವಸತಿ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ 2022–23ನೇ ಸಾಲಿನ ಸಾರ್ವತ್ರಿಕ ವರ್ಗಾವಣೆ ಮಾಡುವ ಬಗ್ಗೆ.

ಉಲ್ಲೇಖ: 1. ಸರ್ಕಾರದ ಆದೇಶ ಸಂಖ್ಯೆ : ಸಕಇ 308 ಎಂಡಿಎಸ್ 2022, ದಿ– 05.05.2022
2. ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 16 ಸೇನೌವ 2022 ದಿನಾಂಕ: 30.04.2022

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದ ವಸತಿ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ 2022–23 ನೇ ಸಾಲಿನ ಸಾರ್ವತ್ರಿಕ ವರ್ಗಾವಣಾ ಮಾರ್ಗಸೂಚಿಯನ್ನು ಉಲ್ಲೇಖ(1) ರ ಸರ್ಕಾರ ಆದೇಶದೊಂದಿಗೆ ಹೊರಡಿಸಲಾಗಿರುತ್ತದೆ.

ಉಲ್ಲೇಖ (2) ರ ಸರ್ಕಾರದ ಆದೇಶದಲ್ಲಿ 2022–23 ನೇ ಸಾಲಿನಲ್ಲಿ ದಿನಾಂಕ 01.05.2022 ರಿಂದ 15.06.2022 ರೊಳಗೆ ಸಾರ್ವತ್ರಿಕ ವರ್ಗಾವಣೆ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಆದೇಶಿಸಲಾಗಿರುತ್ತದೆ.

ಉಲ್ಲೇಖ(2)ರ ಸರ್ಕಾರದ ಆದೇಶದಂತೆ, ಉಲ್ಲೇಖ(1) ರ ಸರ್ಕಾರದ ಆದೇಶದ 2022–23ನೇ ಸಾಲಿನ ಮಾರ್ಗಸೂಚಿಯನ್ವಯ ವರ್ಗಾವಣೆಗೆ ಅರ್ಜಿಯನ್ನು ಆಹ್ವಾನಿಸಲಾಗಿದೆ. ಸಂಘದ ಸಿಬ್ಬಂದಿಗಳು ಸಂಘದ ಎಸ್.ಎಂ.ಎಸ್ ತಂತ್ರಾಂಶದಲ್ಲಿ ದಿನಾಂಕ: 25.05.2022 ರ ಬೆಳಿಗ್ಗೆ 10.30 ರಿಂದ ದಿನಾಂಕ 28.05.2022 ರ ಸಂಜೆ 5.30 ರವರೆಗೆ ವರ್ಗಾವಣೆಗೆ ಅರ್ಜಿ ಸಲ್ಲಿಸಲು ಅವಕಾಶವನ್ನು ಕಲ್ಪಿಸಲಾಗಿದೆ. ವಸತಿ ಶಾಲೆಗಳ ಸಿಬ್ಬಂದಿಗಳ ವರ್ಗಾವಣೆ ಸಲ್ಲಿಸಲು ಈ ಕೆಳಕಂಡ ಅಂಶಗಳಿಗೊಳಪಟ್ಟು ಅರ್ಜಿ ಸಲ್ಲಿಸಬೇಕಾಗುತ್ತದೆ.

1. ಸಂಘದ ಎಸ್.ಎಂ.ಎಸ್ ತಂತ್ರಾಂಶದಲ್ಲಿ ಆಯಾ ವಸತಿ ಶಾಲೆಗಳ ಪ್ರಾಂಶುಪಾಲರ ಮೂಲಕ ವರ್ಗಾವಣೆಗೆ ಅರ್ಜಿಯನ್ನು ಸಲ್ಲಿಸುವುದು.
2. ವಸತಿ ಶಾಲೆಗಳ ಸಿಬ್ಬಂದಿಗಳು ವರ್ಗಾವಣೆ ಮಾರ್ಗಸೂಚಿ–2022 ಯನ್ವಯ ಅರ್ಜಿಯನ್ನು ಸಲ್ಲಿಸಬೇಕು.
3. ಅರ್ಹತಾ ಅವಧಿ ಪೂರ್ಣಗೊಂಡ ಸಿಬ್ಬಂದಿಗಳು ಮಾತ್ರ ವರ್ಗಾವಣೆಗೆ ಅರ್ಜಿಯನ್ನು ಸಲ್ಲಿಸತಕ್ಕದ್ದು.
4. ಪತಿ–ಪತ್ನಿ ಪ್ರಕರಣ, ವಿಕಲಚೇತನ, ವಿದವೆ, ವಿಧುರ, ಸೇವಾ ಧೃಢೀಕರಣ ಪತ್ರ, ಹಾಗೂ ಇತರೆ ಪ್ರಮಾಣ ಪತ್ರಗಳನ್ನು ಆಯಾ ವಸತಿ ಶಾಲೆಗಳ ಪ್ರಾಂಶುಪಾಲರು ಪರಿಶೀಲಿಸಿ ದೃಢೀಕರಿಸಿ, ಸಂಬಂದಿಸಿದ ದಾಖಲೆಗಳನ್ನು uplod ಮಾಡಿ ಅರ್ಜಿಯನ್ನು ಸಲ್ಲಿಸಬೇಕು.
5. ಪ್ರಾಂಶುಪಾಲರು ಆಯಾ ಜಿಲ್ಲಾ ಮಟ್ಟದ ಅಧಿಕಾರಿಗಳಿಂದ ದಾಖಲೆಗಳನ್ನು ದೃಢೀಕರಿಸಿ ಸಲ್ಲಿಸುವುದು.
6. ನಿಗಧಿತ ಅವಧಿಯ ನಂತರ ಸಲ್ಲಿಸುವ ಸಿಬ್ಬಂದಿಗಳ ವರ್ಗಾವಣಾ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

ನಂ. 8, ಎಂ.ಎಸ್.ಬಿ–1,6 & 7ನೇ ಮಹಡಿ, ಕನ್ನಿಂಗ್‌ಹ್ಯಾಮ್ ರಸ್ತೆ, ಬೆಂಗಳೂರು – 560052. ದೂರವಾಣಿ : 080-22283366, 22265755, 22204466, 22207722, ಟೆಲಿಫ್ಯಾಕ್ಸ್ : 080-22262288
# 8, M.S.B-1, 6th & 7th Floor, Cunningham Road, Bengaluru - 560052. Phone : 080-22283366, 22265755, 22204466, 22207722, Telefax : 080-22262288
E-mail : edkreis@rediff.com, Website : www.kreis.kar.nic.in

7. ವರ್ಗಾವಣೆಗೆ ಅರ್ಹತಾವಧಿ ಪೂರ್ಣಗೊಳಿಸಿದ ಸಿಬ್ಬಂದಿ, ಕನಿಷ್ಠ ಸೇವಾ ಅವಧಿ ಪೂರ್ಣಗೊಳಿಸಿದ ಸಿಬ್ಬಂದಿಯ ಸ್ಥಾನಕ್ಕೆ ವರ್ಗಾವಣೆ ಕೋರಬಹುದಾಗಿದ್ದು, ಕನಿಷ್ಠ ಸೇವಾ ಅವಧಿ ಪೂರ್ಣಗೊಳಿಸಿ ವರ್ಗಾವಣೆಯಲ್ಲಿ ಸ್ಥಳಾಂತರಗೊಂಡ ಸಿಬ್ಬಂದಿ, ಇನ್ನೊಬ್ಬ ಕನಿಷ್ಠ ಸೇವಾ ಅವಧಿ ಪೂರ್ಣಗೊಳಿಸಿದ ಸಿಬ್ಬಂದಿಯ ಸ್ಥಾನಕ್ಕೆ ವರ್ಗಾವಣೆ ಕೋರಲು ಅವಕಾಶವಿರುವುದಿಲ್ಲ. ಕಡ್ಡಾಯವಾಗಿ ಖಾಲಿ ಇರುವ ಸ್ಥಾನಗಳಿಗೆ ಮಾತ್ರ ವರ್ಗಾವಣೆ ಕೋರಬಹುದು.
8. ವಸತಿ ಶಾಲೆಗಳ ಸಿಬ್ಬಂದಿಗಳು ಯಾವ ವಸತಿ ಶಾಲೆಯಿಂದ ವೇತನ ಸೆಳೆಯಲಾಗುತ್ತಿದೆಯೋ, ಅದೇ ವಸತಿ ಶಾಲೆ/ಕಾಲೇಜುಗಳಿಂದ ವರ್ಗಾವಣೆಗೆ ಅರ್ಜಿಯನ್ನು ಸಲ್ಲಿಸಬೇಕು. ಅಂದರೆ ನಿಯೋಜನೆಯ ಮೇಲೆ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳು ಕಡ್ಡಾಯವಾಗಿ ಮೂಲ ಸ್ಥಾನದ ವಸತಿ ಶಾಲೆ/ ಕಾಲೇಜುಗಳಿಂದ ಅರ್ಜಿ ಸಲ್ಲಿಸತಕ್ಕದ್ದು. ಒಂದು ವೇಳೆ ಬೇರೆ ವಸತಿ ಶಾಲೆಯ ಮೂಲಕ ಅರ್ಜಿ ಸಲ್ಲಿಸಿದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗವುದು.
9. ಸ್ವಂತಂತ್ರ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರು ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಗಳ ಪ್ರಾಂಶುಪಾಲರ ಹುದ್ದೆಗೆ ವರ್ಗಾವಣೆ ಬಯಸಿದಲ್ಲಿ 6 ರಿಂದ 12ನೇ ತರಗತಿಗಳ ವರೆಗಿನ ಎಲ್ಲಾ ತರಗತಿಗಳ ನಿರ್ವಹಣೆ ಮಾಡುವ ಷರತ್ತಿಗೊಳಪಟ್ಟಿರುತ್ತದೆ.
10. ಸ್ವಂತಂತ್ರ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರು, ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಗಳ ಉಪನ್ಯಾಸಕರ ಹುದ್ದೆಗೆ ವರ್ಗಾವಣೆ ಬಯಸಿದಲ್ಲಿ 9 ರಿಂದ 12ನೇ ತರಗತಿಗಳ ವರೆಗಿನ ಎಲ್ಲಾ ತರಗತಿಗಳ ಪಾಠ ಪ್ರವಚನ ಮಾಡುವ ಷರತ್ತಿಗೊಳಪಟ್ಟಿರುತ್ತದೆ.

ಮೇಲ್ಕಂಡಂತೆ ಸರ್ಕಾರದ ಆದೇಶದನ್ವಯ 2022-23ನೇ ಸಾಲಿನ ಮಾರ್ಗಸೂಚಿಯಲ್ಲಿ ನಿಗಧಿಪಡಿಸಿರುವ ಮಾನದಂಡಗಳನ್ವಯ ವರ್ಗಾವಣೆಗೆ ಅರ್ಜಿಯನ್ನು ನಿಗಧಿತ ಅವಧಿಯೊಳಗೆ ಸಲ್ಲಿಸಲು ತಿಳಿಸಿದೆ. ಕೌನ್ಸಿಲಿಂಗ್ ವೇಳಾಪಟ್ಟಿಯನ್ನು ಮುಂದಿನ ದಿನಗಳಲ್ಲಿ ತಿಳಿಸಲಾಗುವುದು.

ಕಾರ್ಯನಿರ್ವಾಹಕ ನಿರ್ದೇಶಕರು

ಪ್ರತಿಯನ್ನು:
1. ಎಲ್ಲಾ ಜಿಲ್ಲೆಗಳ ಜಂಟಿ ನಿರ್ದೇಶಕರು/ ಉಪ ನಿರ್ದೇಶಕರು, ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ
2. ಎಲ್ಲಾ ಜಿಲ್ಲೆಗಳ ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಖೆ ರವರ ಮಾಹಿತಿಗಾಗಿ.
3. ಎಲ್ಲಾ ಜಿಲ್ಲೆಗಳ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ರವರ ಮಾಹಿತಿಗಾಗಿ.
4. ಪ್ರಾಂಶುಪಾಲರು. ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ/ಏಕಲವ್ಯ/ಶ್ರೀಮತಿ ಇಂದಿರಾಗಾಂಧಿ/ಡಾ॥ ಬಿ.ಆರ್ ಅಂಬೇಡ್ಕರ್ ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆ ರವರ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ.
5. ಎಲ್ಲಾ ವಸತಿ ಶಾಲೆಗಳ ಸಿಬ್ಬಂದಿಗಳಿಗೆ ಆಯಾ ವಸತಿ ಶಾಲೆಗಳ ಪ್ರಾಂಶುಪಾಲರ ಮುಲಕ
6. ಕಛೇರಿ ಪ್ರತಿ.